**3 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ, ಹುಬ್ಬಳ್ಳಿ**

**ಸಿ.ಸಿ.ನಂ. 1102/2025**

ಫಿರ್ಯಾದಿಃ ಸಿದ್ದನಗೌಡ ತಂದೆ ಗೌಡಪ್ಪಗೌಡ ಭರಮಗೌಡ್ರ.

**ವಿರುದ್ಧ**

ಆರೋಪಿಃ ಶ್ರೀಮತಿ ಲಕ್ಷ್ಮೀ ಗಂಗಾಧರ ನರಗುಂದ.

**-ಃ ಅರೋಪಿ ಹೇಳಿಕೆ 313 ದಂಡ ಪ್ರಕ್ರಿಯ ಅನ್ವಯ ಃ-**

**ಪ್ರಶ್ನೆ.1ಃ ಪಿಡಬ್ಲ್ಯೂ-1** ಸಿದ್ದನಗೌಡ ತಂದೆ ಗೌಡಪ್ಪಗೌಡ ಭರಮಗೌಡ್ರ ತಮ್ಮ ಮುಖ್ಯ ವಿಚಾರಣೆಯಲ್ಲಿ, ತಾವು ಮತ್ತು ಆರೋಪಿಯಾದ ನೀವು ಒಬ್ಬರಿಗೊಬ್ಬರು ಪರಿಚಯಸ್ಥರು ಇದ್ದು, ನೀವು ಫಿರ್ಯಾದಿದಾರರ ಕಡೆಯಿಂದ ರೂ. 1,40,000/- ಗಳ ಕೈಗಡ ಸಾಲವನ್ನು ಪಡೆದುಕೊಂಡಿದ್ದು ಇದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಈ ಬಗ್ಗೆ ನೀವು ಏನು ಹೇಳುತ್ತೀರಾ?

**ಉತ್ತರಃ-**

**ಪ್ರಶ್ನೆ.2ಃ** ಪಿ.ಡಬ್ಲ್ಯು-1 ರವರು ತಮ್ಮ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ಸದರೀ ಸಾಲದ ಹಣವನ್ನು ಮರುಪಾವತಿಸುವಂತೆ ನಿಮಗೆ ಕೇಳಿಕೊಂಡಾಗ ಆರೋಪಿಯಾದ ನೀವು ಸಾಲದ ಮರುಪಾವತಿಗಾಗಿ ಸ್ಟೇಟ ಬ್ಯಾಂಕ ಆಫ್ ಇಂಡಿಯಾ, ನವನಗರ ಬ್ರಾಂಚಿನ ಚೆಕ್ಕ ನಂ. 808354 ರೂ. 1,40,000/- ದಿಃ 14.06.2024 ಎಂದು ನಮೂದಿಸಿ ಫಿರ್ಯಾದಿದಾರರಿಗೆ ಕೊಟ್ಟಿರುತ್ತೀರಿ. ಸದರಿ ಚೆಕ್ಕನ್ನು ನಗದಿಕರಣಕ್ಕೆ ಫಿರ್ಯಾದಿದಾರರು ತಮ್ಮ ಬ್ಯಾಂಕ ಆದ ಕರ್ನಾಟಕ ಬ್ಯಾಂಕ ನವನಗರ ಬ್ರಾಂಚಿಗೆ ಸಲ್ಲಿಸಿದಾಗ ಸದರಿ ಚೆಕ್ಕು ನಗದಿಕರಣವಾಗದೆ "**Funds insufficient**" ಎಂಬ ಶರಾದೊಂದಿಗೆ ದಿಃ 15.03.2024 ರಂದು ಹಿಂದಿರುಗಿಸಲಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಈ ಬಗ್ಗೆ ನೀವು ಏನು ಹೇಳುತ್ತೀರಾ?

**ಉತ್ತರಃ-**

**ಪ್ರಶ್ನೆ.3ಃ** ಪಿ.ಡಬ್ಲ್ಯು-1 ರವರು ತಮ್ಮ ಮುಂದುವರಿದ ಮುಖ್ಯ ವಿಚಾರಣೆಯಲ್ಲಿ ಈ ಬಗ್ಗೆ ಆರೋಪಿಯಾದ ನಿಮಗೆ ದಿಃ 16.07.2024 ರಂದು ನಿಮಗೆ ನೋಟಿಸು ನೀಡಿದ್ದು, ಸದರಿ ನೋಟಿಸನ್ನು ಆರೋಪಿಯಾದ ನೀವು ಸ್ವಿಕರಿಸಿದ್ದು ಅದಕ್ಕೆ ಇದುವರೆಗೂ ಯಾವುದೇ ಮರುಜವಾಬನ್ನೂ ನೀಡಿರುವುದಿಲ್ಲ ಹಾಗೂ ಸದರಿ ಚೆಕ್ಕಿನ ಮೊತ್ತವನ್ನು ಸಹ ಮರುಪಾವತಿಸಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ ಈ ಬಗ್ಗೆ ನೀವು ಏನು ಹೇಳುತ್ತೀರಾ?

**ಉತ್ತರಃ-**

**ಪ್ರಶ್ನೆ.4ಃ ನಿಮಗೆ** ಈ ಕೇಸಿನ ಬಗ್ಗೆ ಏನನ್ನಾದರು **ಹೇಳಲು ಇದೆಯೇ ?**
**ಉತ್ತರಃ**

**ಪ್ರಶ್ನೆ.5ಃ ನಿಮ್ಮ ಪರ ಯಾರಾದರೂ ಸಾಕ್ಷಿದಾರರು ಇದ್ದಾರೆಯೇ ?**
**ಉತ್ತರಃ**

**(ಈ ಮೇಲಿನ ಸಾಕ್ಷಿದಾರರ ಹೇಳಿಕೆಗಳನ್ನು ಅರೋಪಿಗೆ ನನ್ನ ಸಮಕ್ಷಮ ಓದಿ ಹೇಳಲಾಯಿತು ಹಾಗೂ ಈ ದಾಖಲೆಯು ಅರೋಪಿ ನೀಡಿದ ಉತ್ತರಗಳನ್ನು ಒಳಗೊಂಡಿದೆ ಎಂದು ದೃಢೀಕರಿಸಿದೆ)**

ದಿನಾಂಕ 13.11.2025
**ಸ್ಥಳ** ಃ ಹುಬ್ಬಳ್ಳಿ.

3 ನೇ **ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,** ಹುಬ್ಬಳ್ಳಿ.